## ಸಹಪಾಠಿಗಳ ದಬ್ಬಾಳಿಕೆ

ಕೇವಲ ಹೊರಗಿನ ಜನರಿಂದ, ಅಪರಿಚಿತರಿಂದ, ಹಿರಿಯರಿಂದ ಮಾತ್ರ ಮಕ್ಕಳಿಗೆ ಅಪಾಯ-, ಕಿರುಕುಳ ಎದುರಾಗುವುದಲ್ಲ; ಸಹಪಾಠಿಗಳಿಂದ, ಅವರಿಗಿಂತ ಮೇಲಿನ ತರಗತಿಯಲ್ಲಿರುವ ಮಕ್ಕಳಿಂದಲೂ ದೈಹಿಕ, -ಮೌಖಿಕ, -ಮಾನಸಿಕ ಕಿರುಕುಳ ನಡೆಯಬಹುದು. ಇದರ ಬಗ್ಗೆ ಅಪ್ಪ-–ಅಮ್ಮ ಮತ್ತು ಶಿಕ್ಷಕರಿಗೆ ಅರಿವಿರಬೇಕು, ಮುಕ್ತವಾಗಿ ಮಕ್ಕಳನ್ನು ಕೇಳಿಸಿಕೊಳ್ಳಬೇಕು.

ಕೀಟಲೆ ಅಥವಾ ದಬ್ಬಾಳಿಕೆ ಹೆಚ್ಚಿನ ಸಮಯ ನಡೆಯುವುದು ದೈಹಿಕವಾಗಿ ಬಲ ಹೊಂದಿದ ಮಕ್ಕಳಿಂದ ದುರ್ಬಲ ಮಕ್ಕಳ ಮೇಲೆ. ಯಾವಾಗಲಾದರೊಮ್ಮೆ ಇದು ಪ್ರತಿಯೊಬ್ಬರ ಬಾಲ್ಯದಲ್ಲಿಯೂ ನಡೆಯುತ್ತದೆ. ಆದರೆ ಮತ್ತೆ ಮತ್ತೆ ನಡೆಯುವ ಕಿರುಕುಳ ಮಕ್ಕಳನ್ನು ಅಂಜುಕುಳಿಗಳನ್ನಾಗಿ ಮಾಡುತ್ತದೆ.

ಹಿರಿಯರಾಗಿ ಮಕ್ಕಳ ಬಳಿ ನಿಮ್ಮ ಬಾಲ್ಯದ ಈ ರೀತಿಯ ಪ್ರಸಂಗಗಳನ್ನು ಹಂಚಿಕೊಳ್ಳುವುದು ಅಗತ್ಯ. ಅದರಿಂದ ಹೊರಬರಲು ನೀವೇನು ಮಾಡಿದಿರಿ ಎಂಬುದನ್ನು ಚರ್ಚಿಸಿ.

ಇಂಥ ಕಿರುಕುಳ, -ದಬ್ಬಾಳಿಕೆ ನಡೆಯುವ ಸಮಯದಲ್ಲಿ ಮಕ್ಕಳಿಗೆ ಒಬ್ಬರಿಗೊಬ್ಬರು ಬೆಂಬಲ ನೀಡುವುದನ್ನು ಕಲಿಸಿ. ಚಿಕ್ಕ ನಾಟಕದಂಥ ಪಾತ್ರ ನಿರ್ವಹಣೆಗಳ ಮೂಲಕ ಕಿರುಕುಳ ಎದುರಿಸುವ ತರಬೇತಿ ನೀಡಿ.

ತರಗತಿಯಲ್ಲಿ ಶಿಕ್ಷಕರು ಈ ಬಗ್ಗೆ ಎಲ್ಲಾ ಮಕ್ಕಳಿಗೆ ಹಾಗೆ ಮಾಡದಂತೆ ತಿಳಿಹೇಳಿ, ಮಾಡಿದರೆ ಕೈಗೊಳ್ಳುವ ಕಠಿಣ ಕ್ರಮಗಳ ಬಗ್ಗೆ ಎಚ್ಚರಿಸಬೇಕು.

ದಬ್ಬಾಳಿಕೆ ನಡೆಸುವ ಮಕ್ಕಳೂ ಭಾವನಾತ್ಮಕ ಸಮಸ್ಯೆಗಳನ್ನು ಹೊಂದಿರುತ್ತಾರೆ. ಹಾಗಾಗಿ ಅವರಿಗೂ ಆಪ್ತಸಲಹೆಯ ಅಗತ್ಯವಿರುತ್ತದೆ.

ಹದಿಹರೆಯದ ಮಕ್ಕಳು ನೀವಾಗಿದ್ದರೆ ಶಾಲಾ ಕಿರುಕುಳದ ಸಂದರ್ಭದಲ್ಲಿ ಈ ಕೆಳಗಿನವುಗಳನ್ನು ಗಮನಿಸಿ.

★ ನಿಮಗೆ ಇತರರು ಕಿರುಕುಳ ನೀಡಲು ಬಂದರೆ ಹೆದರಿಕೆ, ಕೋಪ, ಬೇಸರ ತೋರಿಸಬೇಡಿ. ಇದಕ್ಕೆ ನಿರೀಕ್ಷೆ, ತರಬೇತಿ ಎರಡೂ ಅಗತ್ಯವಿದೆ. ಕಿರುಕುಳ ನೀಡುವವರು ಅದರಿಂದ ತೊಂದರೆಗೆ ಒಳಗಾದವರಿಗೆ ಸಾಮಾನ್ಯವಾಗಿ ಕಿರುಕುಳ ಮುಂದುವರೆಸಲಾರರು.

★ ಅವರೊಡನೆ ದೈಹಿಕ ಕಾದಾಟಕ್ಕೆ ನಿಲ್ಲಬೇಡಿ. ಅವರು ನಿಮಗಿಂತ ದೈಹಿಕವಾಗಿ ಬಲಿಷ್ಠರು ಎಂಬುದನ್ನು ಗಮನಿಸಿ. ದೈಹಿಕವಾದ ಗಾಯ-, ಪೆಟ್ಟುಗಳನ್ನು ತಡೆಯುವುದೂ ಮುಖ್ಯ.

★ ಆ ಸಂದರ್ಭವನ್ನು ತಡೆಯಲು, ತಪ್ಪಿಸಿಕೊಳ್ಳಲು ಪ್ರಯತ್ನಿಸಿ. ನಿಮ್ಮನ್ನು ಬೆಂಬಲಿಸಬಲ್ಲ ಸ್ನೇಹಿತರ ಜೊತೆಯಲ್ಲಿರಲು ಪ್ರಯತ್ನಿಸಿ.

★ ಈ ರೀತಿಯ ಕಿರುಕುಳ ನಡೆದಾಗ ನಿಮ್ಮ ಆತ್ಮೀಯ ಸ್ನೇಹಿತರು/ ಕೇಳಬಲ್ಲ ಶಿಕ್ಷಕರು ಅಥವಾ ನಿಮ್ಮ ಅಪ್ಪ-– ಅಮ್ಮ ಬಳಿ ಹೇಳಿ. ಅದು 'ಚಾಡಿ'ಯೆನಿಸುವುದಿಲ್ಲ.

★ ಕಿರುಕುಳವು ಟೀಕೆ-, ಬೈಗುಳಗಳ ಮೂಲಕ ನಡೆದಿದ್ದರೆ ಅವುಗಳನ್ನು ಗಂಭೀರವಾಗಿ ಪರಿಗಣಿಸಬೇಡಿ. ಅವುಗಳ ಬಗ್ಗೆ ಬಹಳ ಹೊತ್ತು ಯೋಚಿಸಬೇಡಿ.



ಚಟುವಟಿಕೆಗಳಲ್ಲಿಯೂ ಮಕ್ಕಳು ಮುನ್ನಡೆಯುತ್ತಾರೆ. ಶಾಲೆಯಲ್ಲಿ ಹೊಂದಿಕೊಳ್ಳುವುದು ಸುಲಭವಾಗುತ್ತದೆ. ಶಾಲೆಗೆ ಹೋಗುವುದನ್ನು ಎದುರು ನೋಡುತ್ತಾರೆ.

ಶಾಲೆಯ ಬಗೆಗಿನ ನಕಾರಾತ್ಮಕ ಧೋರಣೆ ಒಂದು ದಿನದಲ್ಲಿ ಧುತ್ತನೆ ಉಂಟಾಗುವಂತದ್ದಲ್ಲ. ಹಲವು ಬಾರಿ ವಿಫಲ ಪ್ರಯತ್ನಗಳು, ಹೋಂವರ್ಕ್ ಮಾಡದೇ ಪದೇ ಪದೇ ಶಿಕ್ಷೆಗೆ ಒಳಗಾಗುವಿಕೆ, ಓದಿನಲ್ಲಿ ಯಶಸ್ಸು ಸಿಗದಿರುವುದು– ಇವು ಮಕ್ಕಳನ್ನು ಮತ್ತೆ ಮತ್ತೆ ಶಾಲೆಯ ಸಲುವಾಗಿ ಕಷ್ಟಪಡುವುದರಿಂದ ಹಿಂದೆಳೆಯುತ್ತವೆ.

ಮಕ್ಕಳು ಶಾಲೆಗೆ ಹೋಗುವುದನ್ನು ಪ್ರೀತಿಸಬೇಕೆಂದರೆ ಮಕ್ಕಳನ್ನು ಪ್ರಶ್ನೆ ಕೇಳಲು ಬಿಡಿ! ತಾವೇ ಹಲವು ಉತ್ತರಗಳನ್ನು ಪ್ರಶ್ನೆಯೊಂದಕ್ಕೆ ಹುಡುಕುವ ಅವಕಾಶ ಅವರಿಗೆ ನೀಡಿ. ಕುತೂಹಲ ಕಲಿಕೆಯನ್ನು ಆಸಕ್ತಿಕರವಾಗಿಸಬಲ್ಲದು. ಚರ್ಚೆ ಎಲ್ಲಿಯೂ ನಡೆಯಲು ಸಾಧ್ಯವಿದೆ. ಕಾರಿನಲ್ಲಿ, ಅಂಗಡಿಗೆ ಹೋಗುವಾಗ ಇತ್ಯಾದಿ. ಮಕ್ಕಳಿಗೆ ಆಸಕ್ತಿ ಇರುವ ವಿಷಯಗಳ ಬಗ್ಗೆ ಅವರು ಆತ್ಮವಿಶ್ವಾಸದಿಂದ ಮಾತನಾಡುವ ಅವಕಾಶ ನೀಡಿ. ಅವರು ಪ್ರಶ್ನೆ ಕೇಳುವಾಗ, ಏನೋ ಹೇಳುವಾಗ ಗಮನವಿಟ್ಟು ಕೇಳುವ 'ಕೇಳುಗ'ರಾಗಿ. ಶಾಲಾ ಕಲಿಕೆ ಮತ್ತು ಮಕ್ಕಳ ನಡುವಿನ ಸೇತುವೆಯಾಗಿ ನೀವು ಕಾರ್ಯ ನಿರ್ವಹಿಸಿದರೆ ಮಾತ್ರ ಮಕ್ಕಳು ಶಾಲೆಯನ್ನು ಪ್ರೀತಿಸುವುದು ಸಾಧ್ಯವಾದೀತು.

### ಕೇವಲ ಶಾಲೆ, ಸರ್ಕಾರದ ಹೊಣೆಯಲ್ಲ..

ಶಾಲಾ ಸುರಕ್ಷತೆಯ ಬಗೆಗೆ ಸರ್ಕಾರವೇನೋ, ಶಿಕ್ಷಣದ ಬೋರ್ಡ್‌ಗಳೇನೋ ಹಲವು ಕಠಿಣ